<u>ಸಾಕ್ಷಿಯನ್ನು ದಿಃ **07.09.2022** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಎಸ್ ಜೆ ವಕೀಲರಿಂದಃ</u>**

ಪುಟ್ಟಾಭೋವಿಗೆ ಒಟ್ಟು 7 ಜನ ಮಕ್ಕಳು. ಅವರ ಹೆಸರು ದೇವೀರಮ್ಮ, ತಿಮ್ಮಾರೆಡ್ಡಿ, ಜಯಮ್ಮ, ಪಾರ್ವತಮ್ಮ, ಕೆಂಚಪ್ಪ, ಶಿವಮ್ಮ, ಭಾಗೀರಥಮ್ಮ. ಈ ದಾವೆಯು ನನ್ನ ತಾತನ ಆಸ್ತಿಯಲ್ಲಿ ಭಾಗ ಕೊಡಬೇಕೆಂದು ಸಲ್ಲಿಸಿದ್ದೇನೆ . ಮೇಲೆ ಹೇಳಿರುವ ನನ್ನ ತಾತನ 7 ಜನ ಮಕ್ಕಳ ಬಗ್ಗೆ ನಮ್ಮ ವಕೀಲರಿಗೆ ಹೇಳಿದ್ದೇನೆ.

ನನ್ನ ತಾಯಿಯ ಹೆಸರು ರೇಣುಕಮ್ಮ. ಸಾಕ್ಷಿಗೆ ಹಕ್ಕು ಖುಲಾಸೆ ಪತ್ರದ ನಕಲು ದಾಖಲೆಯ ಹಿಂಬದಿಯಲ್ಲಿರುವ ಎರಡು ಛಾಯ ಚಿತ್ರಗಳನ್ನು ತೋರಿಸಲಾಯಿತು ಸಾಕ್ಷಿದಾರರು ಅವುಗಳನ್ನು ನೋಡಿ ರೇಣುಕಮ್ಮ ನನ್ನ ತಾಯಿ, ಲಕ್ಷ್ಮೀದೇವಿ ಅಂದರೆ ನಾನು ಎಂದು ಗುರುತಿಸಿ ಹೇಳುತ್ತಾರೆ. ಸದರಿ ದಾಖಲೆ ಜೆರಾಕ್ಸ್ ಪ್ರತಿಯಾಗಿದ್ದರಿಂದ ನಿಶಾನೆಗೆ ಒಳಪಡಿಸಿಲ್ಲ. ಸದರಿ ದಾಖಲೆಯಂತೆ 14.08.2015 ರಂದು ತಾಯಿಯಿಂದ ರೂ.1 ಲಕ್ಷ ನಗದು ಮತ್ತು 50 ಗ್ರಾಂ ಚಿನ್ನಾಭರಣ ಪಡೆದು ನನ್ನ ತಾಯಿ ಕುಟುಂಬದಿಂದ ನನ್ನ ಹಕ್ಕು ಖುಲಾಸೆ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆ ಮೃತಪಟ್ಟು 7 ವರ್ಷಗಳಾಗಿವೆ. ನನ್ನ ತಾಯಿ ಮನೆಬಿಟ್ಟು ಹೋಗಿ 6 ವರ್ಷಗಳಿಂದ ಕಾಣೆಯಾಗಿರುತ್ತಾಳೆ. ಆ ಬಗ್ಗೆ ನನಗೆ ಗೊತ್ತಿಲ್ಲ. ಈ ದಾವೆ ಸಲ್ಲಿಸಿದಾಗ ನನ್ನ ತಾಯಿ ಮನೆಯಲ್ಲಿ ಇರಲಿಲ್ಲ. ನನಗೆ ಒಬ್ಬ ತಮ್ಮ ಸಿದ್ದ ಮತ್ತು ತಂಗಿ ಅಂಬುಜ ಇರುತ್ತಾರೆ. ನನ್ನ ತಂದೆ 1ನೇ ಪ್ರತಿವಾದಿ ತಿಮ್ಮಾರೆಡ್ಡಿ ಮತ್ತು ನನ್ನ ಅಜ್ಜಿ ತಿಮ್ಮಕ್ಕ ಪುಟ್ಟಾಭೋವಿ ಮೃತಪಟ್ಟ ನಂತರ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ

ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರವನ್ನು ನಾನು ನೋಡಿಲ್ಲ ಆದರೆ ಆ ಬಗ್ಗೆ ನಾನು ತಿಳಿದುಕೊಂಡಿದ್ದೇನೆ.

ದಾವಾ ಎ ಷಡ್ಯೂಲ್ ಪೈಕಿ 2 ಎಕರೆ 5 ಗುಂಟೆ ಸರ್ವೆ ನಂ.223/ಪಿ5 ರಲ್ಲಿ ನನ್ನ ತಂದೆ ಪಾಲಿಗೆ ಬಂದಿದೆ ಎಂದರೆ ಸರಿ. ಉಳಿದ 2 ಎಕರೆ 5 ಗುಂಟೆ 1 ನೇ ಪ್ರತಿವಾದಿ ತಿಮ್ಮಾರೆಡ್ಡಿಗೆ ಬಂದಿದೆ ಎಂದರೆ ನಿಜ. ನನ್ನ ತಂದೆ ಪಾಲಿಗೆ ಬಂದ 2 ಎಕರೆ 5 ಗುಂಟೆ ಜಮೀನಿನಲ್ಲಿ ಈಗಾಗಲೇ ಹಲವಾರು ಜನರಿಗೆ ಮಾರಾಟ ಮಾಡಿದ್ದು ಅವರೆಲ್ಲರೂ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎಂದರೆ ನಿಜ. ಅದೇ ರೀತಿ 1 ನೇ ಪ್ರತಿವಾದಿ ತಿಮ್ಮಾರೆಡ್ಡಿ ತನ್ನ ಪಾಲಿಗೆ ಬಂದ 2 ಎಕರೆ 5 ಗುಂಟೆ ಪೈಕಿ ಹಲವಾರು ಜನರಿಗೆ ಮಾರಾಟ ಮಾಡಿದ್ದು ಅವರೆಲ್ಲರೂ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಎಂದರೆ ಗೊತ್ತಿಲ್ಲ.

ನಾನು ಆಲೂರು ಗ್ರಾಮದಲ್ಲಿ ವಾಸ ಮಾಡುತ್ತಿದ್ದೇನೆ. ದಾವಾ ಎ ಷಡ್ಯೂಲ್ ಆಸ್ತಿ ನಾನು ವಾಸ ಮಾಡುವ ಮನೆಯಿಂದ 2 ಕಿ.ಮೀ ದೂರದಲ್ಲಿದೆ. ಸದರಿ ಜಮೀನು ಊರಿಗೆ ಅಂಟಿಕೊಂಡು ಇದೆ ಎಂದರೆ ಸಾಕ್ಷಿ ದೂರ ಇದೆ ಎಂದು ಹೇಳುತ್ತಾರೆ. ದಾವಾ ಎ ಷಡ್ಯೂಲ್ ನ ಸರ್ವೆ ನಂ. 483 ರ 1 ಎಕರೆ 17 ಗುಂಟೆ ಜಮೀನು ನನ್ನ ಅಜ್ಜಿ ತಿಮ್ಮಕ್ಕನ ಪಾಲಿಗೆ ಬಂದಿದೆ ಎಂದರೆ ನಿಜ. ದಾವಾ ಬಿ ಷಡ್ಯೂಲ್ ನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಆದರೆ ಅದರ ವಿಸ್ತೀರ್ಣ 4 ಎಕರೆ 15 ಗುಂಟೆ ಇದೆ.

ದಾವಾ ಬಿ ಷಡ್ಯೂಲ್ ನ 4 ನೇ ಐಟಂ ಮನೆಯ ಅರ್ಧ ಭಾಗದಲ್ಲಿ ನನ್ನ ತಂದೆ ಕೆಂಚಪ್ಪ ವಾಸಮಾಡುತ್ತಿದ್ದರು. ಈಗ ನನ್ನ ತಂಗಿ ಮತ್ತು ನನ್ನ ತಮ್ಮ ಅದೇ ಅರ್ಧಭಾಗದಲ್ಲಿ ಇದ್ದಾರೆ. ಸದರಿ ಅರ್ಧ ಭಾಗ ನನ್ನ ತಂದೆಗೆ ವಿಭಾಗದಲ್ಲಿ ಬಂದಿದೆ ಎಂದರೆ ನಿಜ. ಸದರಿ 4

ನೇ ಐಟಂ ಆಸ್ತಿಯ ಉಳಿಕೆ ಅರ್ಧಭಾಗದದಲ್ಲಿ ತಿಮ್ಮಾರೆಡ್ಡಿ ಇರುತ್ತಾನೆ ಅನ್ನುವುದು ನಿಜ. ಸದರಿ ಮನೆಯ ಅರ್ಧಭಾಗ ನನ್ನ ತಂದೆ ಕೆಂಚಪ್ಪನಿಗೆ ಬಂದ ಹಾಗೆ ಉಳಿದ ಅರ್ಧ ಭಾಗ ತಿಮ್ಮಾರೆಡ್ಡಿಗೆ ಹೋಗಿದೆ ಎಂದರೆ ನಿಜ.

ದಾವಾ ಸಿ ಷಡ್ಯೂಲ್ ತಿಮ್ಮಾರೆಡ್ಡಿಯವರು ದಿಃ21.03.2005 ರಲ್ಲಿ ಈರಾಭೋವಿಯಿಂದ ಖರೀದಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ಜಮೀನು ನನ್ನ ತಾತನಿಗೆ ಸೇರಿದೆ ನನಗೂ ಅದರಲ್ಲಿ ಭಾಗ ಇದೆ ಎಂದು ಹೇಳುತ್ತಾರೆ. ಸದರಿ ಸಿ ಷಡ್ಯೂಲ್ ಆಸ್ತಿ ತಿಮ್ಮಾರೆಡ್ಡಿಗೆ ಹೇಗೆ ಬಂತು ಎನ್ನುವುದು ಗೊತ್ತಿಲ್ಲ. ನನ್ನ ತಂದೆ ಮೃತಪಟ್ಟಾಗ ನನಗೆ 19 ವರ್ಷ ವಯಸ್ಸಿತ್ತು . ಜಯಮ್ಮ ನನ್ನ ಅತ್ತೆ. ಜಯಮ್ಮ ತಿಮ್ಮಕ್ಕ-ಪುಟ್ಟಾಭೋವಿ ಮಗಳು ಎಂದರೆ ಸರಿ. ತಿಮ್ಮಾರೆಡ್ಡಿ ನನ್ನ ಅತ್ತೆ ಜಯಮ್ಮ ಮೇಲೆ ದಾವಾ ಸಿ ಷಡ್ಯೂಲ್ ಸೇರಿಸಿ ಹಿರಿಯೂರಿನ ಸಿವಿಲ್ ನ್ಯಾಯಾಲಯದಲ್ಲಿ ಓಎಸ್ 25/2009 ಸಲ್ಲಿಸಿದ್ದ ಎಂದರೆ ಗೊತ್ತಿಲ್ಲ. ಅಲ್ಲದೆ ಜಯಮ್ಮ, ಚಂದ್ರಪ್ಪ, ವೆಂಕಟೇಶ್, ಕೆಂಚಪ್ಪ, ಮಹೇಶ್ ಮತ್ತು ಟಿ ಆರ್ ಗೋಪಾಲ್ ಎಲ್ಲರೂ ಸೇರಿ ದಾವೆ ಸಲ್ಲಿಸಿದ್ದರು ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಚಂದ್ರಪ್ಪ ನನ್ನ ಮಾವ ಅಂದರೆ ನನ್ನ ಗಂಡನ ತಂದೆ. ಚಂದ್ರಪ್ಪನ ಮಗ ಕೆಂಚಪ್ಪ ನನ್ನ ಗಂಡ ಎಂದರೆ ನಿಜ. ಚಂದ್ರಪ್ಪನ ಹೆಂಡತಿ ಜಯಮ್ಮ ನನ್ನ ಅತ್ತೆ ಎಂದರೆ ನಿಜ. ಮಹೇಶ ನನ್ನ ಮೈದುನ ಎಂದರೆ ನಿಜ. ಇವರೆಲ್ಲರ ವಿರುದ್ಧ ತಿಮ್ಮಾರೆಡ್ಡಿ ಸದರಿ ದಾವೆ ಸಲ್ಲಿಸಿದ್ದ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ತಿಮ್ಮಾರೆಡ್ಡಿ ಸಿ ಷಡ್ಯೂಲ್ ಆಸ್ತಿಗೆ ಮೂಲ ಮಾಲೀಕ ಎಂದು ತೀರ್ಮಾನವಾಗಿದೆ ಎಂದರೆ ಅದು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಂತರ

ಸದರಿ ದಾವೆಯ ಎಲ್ಲಾ ಪ್ರತಿವಾದಿಯರು ಸೇರಿ ಮೂಲ ದಾವೆಯ ತೀರ್ಮಾನವನ್ನು ಪ್ರಶ್ನಿಸಿ ಇದೇ ನ್ಯಾಯಲಯದಲ್ಲಿ ಆರ್ ಎ 22/2013 ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ಮೇಲ್ಮನವಿ ವಜಾಗೊಂಡಿದೆ ಎಂದರೆ ಗೊತ್ತಿಲ್ಲ. ನಂತರ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರ್ ಎಸ್ ಎ 275/2017 ಸಲ್ಲಿಸಿದ್ದೂ ಸಹ ವಜಾಗೊಂಡಿದೆ ಎನ್ನುವುದು ಗೊತ್ತಿಲ್ಲ.

ನಾನು, ನನ್ನ ಗಂಡ, ಅತ್ತೆ, ಮಾವ ಮತ್ತು ಮೈದುನ ಎಲ್ಲಾ ಒಂದೇ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ. ನಮ್ಮ ಮನೆಯಲ್ಲಿ ಯಾವುದೇ ವಿಚಾರ ನಡೆದರೂ ನನಗೆ ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ತಿಮ್ಮಾ ರೆಡ್ಡಿಯವರು ಈ ಹಿಂದೆ ಆಗಿರುವ ಮೂಲ ದಾವೆಯ ತೀರ್ಮಾನ ಪಡೆದು ನಮ್ಮೆಲ್ಲರನ್ನು 6-7 ತಿಂಗಳ ಹಿಂದೆ ದಾವಾ ಸಿ ಷಡ್ಯೂಲ್ ಆಸ್ತಿಯಿಂದ ಹೊರಹಾಕಿದ್ದಾರೆ ಎಂದರೆ ನಿಜ.

ನನಗೆ ಒಟ್ಟು 5 ಜನ ಅತ್ತೆಯರಿದ್ದಾರೆ. ಭಾಗೀರಥಮ್ಮ ನನಗೆ ಅತ್ತೆಯಾಗಬೇಕು. ಅವರು ಸಹ ಭಾಗ ಕೋರಿ ತಿಮ್ಮಾರೆಡ್ಡಿ ವಿರುದ್ಧ ದಾವೆ ಸಲ್ಲಿಸಿದ್ದಳು ಎಂದರೆ ನಿಜ. ಸದರಿ ದಾವೆಯೂ ಸಹ ವಜಾಗೊಂಡಿದೆ ಎನ್ನುವುದು ನಿಜ. ನನ್ನ ಅತ್ತೆ ಪಾರ್ವತಮ್ಮ ಕೂಡ ತಿಮ್ಮಾ ರೆಡ್ಡಿ ವಿರುದ್ಧ ಬೇರೊಂದು ದಾವೆ ವಿಭಾಗ ಕೋರಿ ಸಲ್ಲಿಸಿದ್ದಳು ಎಂದರೆ ನಿಜ. ಸದರಿ ದಾವೆಯೂ ಕೂಡ ನ್ಯಾಯಾಲಯದಲ್ಲಿ ವಜಾಗೊಂಡಿದೆ ಎಂದರೆ ನಿಜ. ನನ್ನ ಅತ್ತೆ ಜಯಮ್ಮ ಸಹ ಭಾಗ ಕೋರಿ ತಿಮ್ಮಾ ರೆಡ್ಡಿ ಮೇಲೆ ದಾವೆ ಸಲ್ಲಿಸಿದ್ದಳು ಅನ್ನುವುದು ನಿಜ. ಆ ದಾವೆ ಏನಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಜಯಮ್ಮ, ಪಾರ್ವತಮ್ಮ, ಭಾಗೀರಥಮ್ಮನವರು ಸಿ ಷಡ್ಯೂಲ್ ಸ್ವತ್ತಿನ ಬಗ್ಗೆ ಸಲ್ಲಿಸಿದ ಎಲ್ಲಾ ದಾವೆಗಳು

ವಜಾಗೊಂಡಿವೆ ಎಂದರೆ ನಿಜ.

ದಾವಾ ಎ ರಿಂದ **6** ಷಡ್ಯೂಲ್ ಆಸ್ತಿಗಳು ನಮ್ಮ ಒಟ್ಟು ಕುಟುಂಬದ ಸ್ವತ್ತುಗಳು ಎಂದರೆ ಸರಿಯಲ್ಲ. ನಾವು, ತಿಮ್ಮಾರೆಡ್ಡಿ ಯಾವತ್ತೂ ಒಟ್ಟು ಕುಟುಂಬದಲ್ಲಿ ವಾಸವಾಗಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಜೀವಂತ ಇರುವವರೆಗೆ ತಿಮ್ಮಾರೆಡ್ಡಿ ಜೊತೆ ಒಟ್ಟು ಕುಟುಂಬದಲ್ಲಿ ಇದ್ದೆವು. ದಾವಾಸ್ವತ್ತುಗಳು ನಮ್ಮ ಒಟ್ಟು ಕುಟುಂಬದ ಆಸ್ತಿಗಳಲ್ಲ ಹಾಗಾಗಿ ನನಗೆ ಯಾವುದೇ ಪಾಲು ಬರಬೇಕಾಗಿಲ್ಲ ಎಂದರೆ ಸರಿಯಲ್ಲ. ನಾನು, ನನ್ನ ಅತ್ತೆ ಎಲ್ಲರೂ ಸೇರಿ ಪ್ರತಿವಾದಿ ತಿಮ್ಮಾ ರೆಡ್ಡಿಗೆ ತೊಂದರೆ ಕೊಡಲು ಒಂದಲ್ಲಾ ಒಂದು ದಾವೆಗಳನ್ನು ಸಲ್ಲಿಸುತ್ತಾ ಬಂದಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ನನ್ನ ತಾತನ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ನಾನು ನನ್ನ ಅತ್ತೆಯ ಚಿತಾವಣೆ ಮೇರೆಗೆ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಪಾಲು ಬರಬೇಕಾಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.